





ಸಿನಿಮಾಗಳಿಗೆ ಮಸಾಲೆಯಂತಿದ್ದ ಡಿಸ್ಕೋ ಶಾಂತಿ ಸ್ಫೂರ್ತಿಯಾಗಿರಬಹುದೇ ಎಂದು ಕೇಳುವ ಮೊದಲೇ ಶೈಜು ಸರ್ವರ್ ಕರೆದು 'ಈಕೆ ನನ್ನ ಹೆಂಡತಿ, ಶಾಂತಿ' ಎಂದು ಪರಿಚಯಿಸಿದ.

ಆಸ್ಟ್ರೇಲಿಯಾದ 'ಬೂಮರೇಂಗ್'ನ ಸಾಮರ್ಥ್ಯ ಗಮನ ಸೆಳೆಯುವಂಥದು. ಹಿಂದೆ ಹಕ್ಕಿಗಳನ್ನು ಹಿಡಿಯುವುದಕ್ಕೆಂದು ಬಳಸುತಿದ್ದ ಈ ತಿರುಗು ಬಾಣ ಈಗ ಮಕ್ಕಳಿಗೆ ಒಂದು ರೀತಿಯಲ್ಲಿ ಕ್ರೀಡಾಕೂಟದ ಭಾಗವೇ ಆಗಿದೆ. ಇದನ್ನು ಮೇಲೆ ಎಸೆದು ವಾಪಸು ನಿಮ್ಮ ಹತ್ತಿರ ಬರಬೇಕಿದ್ದರೆ ನಿಮ್ಮದು 'ಎತ್ತಿದ ಕೈ' ಯಾಗಿರಬೇಕು. ಎಸೆಯುವ ಧಾಟಿಯಲ್ಲಿದೆ ಅದರ ಸಾಮರ್ಥ್ಯ. ಎಸೆತ ಪಕ್ವವಾಗಿದ್ದರೆ ಅದು ನಿಮ್ಮ ತಲೆಯನ್ನು ಹುಡುಕಿ ಕೊಂಡು ಬರುತ್ತದೆ, ಹುಷಾರ್! ನಾವು ಈ ಕಾರಣಕ್ಕಾಗಿಯೇ ಇದನ್ನು 'ತಿರುಗುಬಾಣವಾದೀತು, ಹುಷಾರ್!' ಅನ್ನುತ್ತೇವೆ. ನಮ್ಮ ವಾಹನದ ಚಾಲಕ ಡೆರೆನ್ ವಾಲೆಸ್ ಬೂಮರೇಂಗ್ ವಿಷಯದಲ್ಲಿ ನುರಿತವನಂತೆ ಕಾಣುತ್ತಿದ್ದ. ಆತನ ಅಪ್ಪ, ಅಜ್ಜ ಚಿಕ್ಕಂದಿನಲ್ಲಿ ಅದೆಷ್ಟು ಗಂಭೀರವಾಗಿ ಬೂಮರೇಂಗ್ ಪಾಠ ಕಲಿಸುತಿದ್ದರು ಎಂದು ಆತ ವಿವರಿಸಿದ. ಮೈದಾನವೊಂದರಲ್ಲಿ ಆತನ ತಿರುಗುಬಾಣದ ಪ್ರಾತ್ಯಕ್ಷಿಕೆಯೂ ನಡೆಯಿತು.

ಗೋಲ್ಡ್ ಕೋಸ್ಟ್ ನಲ್ಲಿ ಸಿಗುವ ಥ್ರಿಲ್ ಗಳಿಗೇನೂ ಕೊರತೆಯಿಲ್ಲ. ಸೀ–ವರ್ಲ್ಡ್ ಅಮ್ಯೂಸ್ ಮೆಂಟ್ ಪಾರ್ಕ್, ವಾರ್ನರ್ ಬ್ರದರ್ಸ್ ಅವರ ಮೂವಿ ವರ್ಲ್ಡ್, ಜೆಟ್ ಬೋಟ್, ಕೇಬಲ್ ರೋಪ್ ವೇ, ಹೆಲಿಕಾಪ್ಟರ್ ನಲ್ಲೊಂದು ಸುತ್ತಾಟ, ಕಗ್ಗತ್ತಲೆಯಲ್ಲಿ ಯಾವುದೋ ಲೋಕಕ್ಕೆ ಎಳೆದುಕೊಂಡು ಹೋಗುವ ಇಲ್ಲ್ಯೂಷನ್‌ಗಳು. ಇನ್ನು ಏನೇನೋ! ಆದರೆ... ಕರಾವಳಿಯ ತಂಗಾಳಿ ಚಳಿಗೆ ಒಂದಿಷ್ಟು ಆಕಾಶದಲ್ಲಿ ತೇಲಬೇಕು ಎಂದು ಅನಿಸಿದರೆ 'ಹಾಟ್ ಡ್ರಿಂಕ್ಸ್' ಸಿಗುವ ಸಾಧ್ಯತೆ ತೀರಾ ವಿರಳ. ಹೆಚ್ಚೆಂದರೆ 'ಇಂಡೋರ್ ಸ್ಕೈ ಡೈವಿಂಗ್ ' (ಒಳಾಂಗಣದಲ್ಲೇ ಗಾಳಿಯಲ್ಲಿ ತೇಲುವ ವ್ಯವಸ್ಥೆ) ಮಾಡಿ ಆಕಾಶದಲ್ಲಿ ತೇಲಿದಂತಹ ಅದ್ಭುತ ಅನುಭವ ಪಡೆಯಬಹುದು! ಯಾಕೋ, ಇಲ್ಲಿಯವರಿಗೆ ಅಮಲು ಏರದ ವೈನ್ ಘಮಲು ಇದ್ದರೆ ಸಾಕು, ದಿಲ್ ಖುಷ್ ಆಗಿರುತ್ತಾರೆ ! ಬೆಳಗ್ಗಿನ ತಿಂಡಿ ತೀರ್ಥ ಆಯಿತು ಎಂದರೆ ತಿಂಡಿ ಜೊತೆಗೆ ವೈನ್ ಇತ್ತು ಎಂದೇ ತಿಳಿಯಬೇಕು.

ವಾಪಸು ಹೋಗಲು ಏರ್ ಪೋರ್ಟ್ ಬಳಿ ಬಂದಾಗ ಕಣ್ಣಿಗೆ ರಾಚಿದ್ದು 'ದಿ ಕೊರಿಯರ್ ಮೇಲ್ ' ದಿನಪತ್ರಿಕೆಯ ಹೆಡ್ ಲೈನ್. '50000 ಡಾಲರ್ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಮೇಯರ್ ರಾಜೀನಾಮೆ' ಎಂಬ ಸುದ್ದಿ. ಪಕ್ಕದಲ್ಲಿದ್ದ 'ಗೋಲ್ಡ್ ಕೋಸ್ಟ್ ಬುಲೆಟಿನ್' ದಿನಪತ್ರಿಕೆಯಲ್ಲಿ 'ಹುಟ್ಟಿದ ಹಬ್ಬದ ದಿನದಂದೇ ಕೊಲೆ ' ಎಂಬ ಸುದ್ದಿ! ನಮಗೂ ಇಲ್ಲಿಯವರಿಗೂ ಅನೇಕ ರೀತಿಯಲ್ಲಿ ವ್ಯತ್ಯಾಸಗಳಿವೆ ಅಂದುಕೊಂಡಿದ್ದವನಿಗೆ, ಈ ಎರಡು ಸುದ್ದಿಗಳು ಯಾಕೆ ಕಣ್ಣಿಗೆ ಬಿತ್ತೋ!